# <u>ಬಲವು ಬಲವೆ ನಿನ್ನ ಬಲವಲ್ಲದೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 397.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 235.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics given here are as per Ref. 1. The wordings in Ref. 2 are same as in Ref. 1. Singer has followed these lyrics.
5. **Note:** Ankita is different in both the books. We have considered book in Ref.1 as standard and taken that Ankita for listing. In Ref. 2, the Ankita given is "siri purandara viTTala".

ರಾಗ: ಮುಖಾರಿ ತಾಳ: ಝಂಪೆ

ಬಲವು ಬಲವೆ ನಿನ್ನ ಬಲವಲ್ಲದೆ, ಮಿಕ್ಕ
ಬಲಗಳುಂಟೆ ಬಣಗು ಗ್ರಹಗಳಿಂದ || ಪ ||

ಹರಿ ನಿನ್ನ ಕೃಪೆಯೆನಗೆ ಚಂದ್ರ ತಾರಾ ಬಲವು
ಹರಿ ನಿನ್ನ ಕರುಣವೇ ರವಿಯ ಬಲವು
ಹರಿ ನಿನ್ನ ಮೋಹವೇ ಎನಗೆ ಗುರು ಭೃಗು ಬಲವು
ಹರಿ ನಿನ್ನ ಒಲುಮೆಯೇ ಶನಿಯ ಬಲವು || ೧ ||

ಮಂಗಳ ಮಹಿಮ ನಿನ್ನ ಅಂಗ ದರುಶನ ಸುಖವ
ಮಂಗಳನ ಬಲವು ಎನ್ನಂಗಕೆ ಸದಾ
ರಂಗ ನಿನ್ನಯ ಚರಣ ಕಂಗಳಲಿ ನೋಡುವುದು
ಹಿಂಗದೆ ಸುಖವನೀವ ಸೌಮ್ಯ ಬಲವಯ್ಯ || ೨ ||

ಆದಿಮೂರುತಿ ನಿನ್ನನರಿವುದೇ ರಾಹು ಬಲ
ಆದಿಮೂಲನೆ ನಿನ್ನ ಗುಣಕಥನವ

ಆದರಿಸಿ ಕೊಂಡಾಡುತಿಹುದೆನಗೆ ಕೇತು ಬಲ
ಆದಿಮಹಿಮನೆ ಮಹಾ ಪುರಂದರ ವಿಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪ್ರಕೃತಿ ನಿಯಾಮಕರೆಂದು ಪ್ರಸಿದ್ಧರಾದ ನವಗ್ರಹಗಳು ಸ್ವತಂತ್ರ ತತ್ತ್ವಗಳಲ್ಲ. ಅವರೊಳಗೆ ಹರಿಯೇ ಪ್ರೇರಕನಾಗಿ ನಿಯಾಮಕನಾಗಿ ನಿಂತು ಅವರಿಂದ ತನ್ನ ಸಂಕಲ್ಪಾನುಸಾರ ಕೆಲಸ ಮಾಡಿಸುವನು. ಇದನ್ನು ತಿಳಿಯುವುದೇ ಮಾಹಾತ್ಮ್ಯಜ್ಞಾನ; ಇದರಿಂದ ಹರಿಯು ಪ್ರಸನ್ನನಾಗುವನು. **'**ಸಕಲಗ್ರಹಬಲ ನೀನೆ**'** ಎಂಬ ಇನ್ನೊಂದು ಕೃತಿಯೂ ಇದೇ ತಾತ್ಪರ್ಯವುಳ್ಳದ್ದು.

**ಬಣಗು** – ಅಲ್ಪ, ಕ್ಷುದ್ರ.

**ಭೃಗು** – ಶುಕ್ರ ಗ್ರಹ.

**ಸೌಮ್ಯ** – ಬುಧ ಗ್ರಹ.

**Classification:** Keerthane
**Ankita:** purandara vittala
**Location:** NA
**Category:** Hari Sarvottama
**Sub-Category:** graha, surya, Chandra, karuna, mangala, olume, sukha, ranga, kannu,
**Pravachana:** NA
**Explanation:** NA